<u>ದಿನಾಂಕ **16-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ **BSD** ವಕೀಲರಿಂದ</u>

ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ಮೃತ್ಯು ಪತ್ರ ಆಂಗ್ಲ ಭಾಷೆಯಲ್ಲಿ ಇರುತ್ತದೆ. ಸದರಿ ಮೃತ್ಯ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತಿರತ್ತವೆಯೇ ಎಂದರೆ ಸಾಕ್ಷಿಯು ವಕೀಲರ ಮುಖಾಂತರ ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೃತ್ಯು ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. ಸದರಿ ಮಹಾದೇಮ್ಮಳ ಮೃತ್ಯು ಪತ್ರುದಲ್ಲಿ ಈ ದಾವೆಯ 1 ನೇ ವಾದಿ ಶರಣಗೌಡ ಆಕೆಯ ಗಂಡನ ತಮ್ಮ ಎಂದು ನಮೂದಿಸಲಾಗಿದೆ. ಸದರಿ ಮೃತ್ಯು ಪತ್ರದಲ್ಲಿ 3 ಜಮೀನುಗಳು ಸ.ನಂ.21, 26 ಮತ್ತು 70 ಎಂದು ನಮೂದು ಇರುತ್ತವೆ. ನಿಡಿ-1 ರಲ್ಲಿ ಸ.ನಂ.26 ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ.ನಂ.326 ಇರುತ್ತದೆ ಎಂದು ನುಡಿಯುತ್ತಾರೆ. ಹೂವಿನ ಹಡಗಿ ಗ್ರಾಮದಲ್ಲಿ ಸ.ನಂ.326 ವರೆಗೆ ಜಮೀನುಗಳು ಇರುವುದಿಲ್ಲ ಎಂದರೆ ಸರಿ. ದಿನಾಂಕ 20.02.2025 ರಂದು ತಹಶೀಲ್ದಾರ ದೇವದುರ್ಗ ಇವರು ಸ.ನಂ.326/ಇ ಹೂವಿನ ಹೆಡಗಿ ಗ್ರಾಮದಲ್ಲಿ ಇರುವುದಿಲ್ಲ ಎಂದು ತಿಳಿವಳಿಕೆ ಪತ್ರ ನೀಡಿರುತಾರೆ ಎಂದರೆ ಸರಿ. ಸಾಕ್ಷಿ ಅದನ್ನು ಒಪ್ಪಿದ್ದರಿಂದ ಅದನ್ನು ನಿಪಿ-145 ಎಂದು ಗುರುತಿಸಲಾಯಿತು. ಮಹಾದೇವಮ್ಮ ತನ್ನ ಕೊನೆಯ ಕಾಲದಲ್ಲಿ ಆರೋಗ್ಯವಂತಳು ಇದ್ದಳು. ದಿನಾಂಕ 14.01.1988 ರಂದು ನನ್ನ ತಂದೆ ಹೆಸರಿಗೆ ಸ.ನಂ.21, 26 ಮತ್ತು 70 ಜಮೀನುಗಳಿಗೆ ಸೇರಿದಂತೆ ಮುಟೇಶನ ಆಗಿರುತ್ತವೆ. ನಿಪಿ-116 ರಂತೆ ನನ್ನ ತಂದೆ ಹೆಸರಿಗೆ ಮುಟೇಶನ ಆಗಿರುತ್ತದೆ. ಸದರಿ ಮುಟೇಶನದಲ್ಲಿ ಮೃತ್ಯು ಪತ್ರದ ಬಗ್ಗೆ ಉಲ್ಲೇಖ ಇರುವುದಿಲ್ಲ. ಸದರಿ ಮುಟೇಶನ ಯಾವ ಆಧಾರದ ಮೇಲೆ ಆಗಿರುತ್ತದೆ ಎಂದರೆ ಸಾಕ್ಷಿಯು ಮೃತ್ಯು ಪತ್ರದ ಆಧಾರದ ಮೇಲೆ ಆಗಿರುತ್ತದೆ ಆದರೆ ಅದನು ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಮಹಾದೇವಮ್ಮಳಿಗೆ ತಿಳಿಯದಂತೆ ನನ್ನ ತಂದೆ ಕಂದಾಯ ಅಧಿಕಾರಿಗಳ ಜೊತೆ ಸೇರಿ ಸದರಿ ಮುಟೇಶನ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯಿಂದ ನಿಪಿ-117 ರಂತೆ ನಮ್ಮ ಹೆಸರಿಗೆ ಸದರಿ ಜಮೀನುಗಳ ಕುರಿತು ಮುಟೇಶನ ಆಗಿರುವುದು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನಿಂದ ನಿಪಿ-118 ರಂತೆ ನಮ್ಮ ತಮ್ಮನ ಹೆಸರಿಗೆ ಸ.ನಂ.70 ಕುರಿತು ಮುಟೇಶನ ಆಗಿರುವುದು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ.

ಸ.ನಂ.94 ರ ಒಟ್ಟು ಕ್ಷೇತ್ರ 4 ಎಕರೆ ಚಿಲ್ಲರೆ ಗುಂಟೆ ಇರುತ್ತದೆ. ಸದರಿ ಜಮೀನು ಯಾರ ಹೆಸರಿಗೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ 2 ಎಕರೆ 8 ಗುಂಟೆ ಮಹಾದೇವಮ್ಮಳ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ಬಾಕಿ ಉಳಿದ ಜಮೀನು ಭೀಮಣ್ಣನ ಹೆಸರಿಗೆ ಇತ್ತು. ಸದರಿ 2 ಎಕರೆ 8 ಗುಂಟೆಯನ್ನು ಮಹಾದೇವಮ್ಮ ಬಸವಂತರಾಯನಿಗ ಒತ್ತಿ ಹಾಕಿರುತ್ತಾರೆ. 2 ಎಕರೆ 18 ಗುಂಟೆಯನ್ನು ಮಹಾದೇವಮ್ಮ ಬಸವಂತರಾಯನಿಗೆ ಒತ್ತಿ ಹಾಕಿರುತ್ತಾರೆ ಎಂದರೆ ಸರಿ. ಸದರಿ ಮಹಾದೇವಮ್ಮ ಜಮೀನನ್ನು ಹಣ ನೀಡಿ ವಾಪಾಸು ಪಡೆದಿರುವುದಿಲ್ಲ. ಒತ್ತಿ ದಾಖಲೆ ನೊಂದಣಿ ಆದ ಬಗ್ಗೆ ನನಗೆ ಗೊತ್ತಿಲ್ಲ ಸದರಿ ದಾಖಲಾತಿ ಬಸವಂತರಾಯನ ಸಾಧೀನದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-119 ರಂತೆ ಸ.ನಂ.94/1 ರಲ್ಲಿ 2 ಎಕರೆ 18 ಗುಂಟೆ ಮಹಾದೇವಮ್ಮಳಿಂದ ಗೂಳಪ್ಪನ ಹೆಸರಿಗೆ ಮುಟೇಶನ ಆಗಿರುತ್ತದೆ ಎಂದರೆ ಸರಿ. ಯಾವ ಆಧಾರದ ಮೇಲೆ ಮಹಾದೇವಮ್ಮಳಿಂದ ಗೂಳಪ್ಪನಿಗೆ ಮುಟೇಶನ ಆಗಿರುತ್ತದೆ ಎಂದು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಈಗ 2 ಎಕರೆ 18 ಗುಂಟೆಯನ್ನು ಗೂಳಪ್ಪ ಈತನು ಭೀಮರೆಡ್ಡಿ ತಂದೆ ಬಸವಂತರಾಯ ಇವರಿಗೆ ಮಾರಾಟ ಮಾಡಿರುತ್ತಾನೆ. ಸದರಿ ಖರೀದಿ ಪತ್ರ ನೊಂದಣಿ ಆಗಿರುತ್ತದೆ. ಗೂಳಪ್ಪನಿಗೆ ಸ.ನಂ.94/1 ರಲ್ಲಿ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ಆತನಿಗೆ ಮಾರಾಟ ಮಾಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮುಟೇಶನ ನಂ.119 ಮಹಾದೇವಮ್ಮಳಿಗೆ ತಿಳಿಯದಂತೆ ನನ್ನ ತಮ್ಮ ಗೂಳಪ್ಪ ಕಾನೂನು ಬಾಹಿರವಾಗಿ ಮುಟೇಶನ ಮಾಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಿಪಿ-120 ಮುಟೇಶನ ಯಾವ ಆಧಾರದ ಆಗಿರುತ್ತದೆ ನನಗೆ ಹೇಳಲು ಬರುವುದಿಲ್ಲ. ಸದರಿ ಮುಟೇಶನ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-124 ಮುಟೇಶನ ಯಾವ ಆಧಾರದ ಆಗಿರುತ್ತದೆ ನನಗೆ ಹೇಳಲು ಬರುವುದಿಲ್ಲ. ಸದರಿ ಮುಟೇಶನ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.